ಜವಾಬ್ದಾರಿ ಏನೆಂದರೆ, ಇವತ್ತು ಮಧ್ಯಾಹ್ನದೊಳಗೆ ಅಪ್ರೋಪ್ರಿಯೇಶನ್ ಬಿಲ್ ಪಾಸ್ ಆಗಿ ಹೋಗಬೇಕು, ಇದನ್ನು ಮುಗಿಸಿದ ನಂತರ ತಾವು ಹೇಳಿರತಕ್ಕಂಥ ವಿಷಯಗಳೆನ್ನೆಲ್ಲಾ ತೆಗೆದುಕೊಳ್ಳುತ್ತೇನೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ :— ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠದ ಬಗ್ಗೆ ಧರಣಿ ಮತ್ತು ಉಪವಾಸ ಕುಳಿತಿರುವ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು :— ನೆನಪಿದೆ, ಆನಂತರ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ :— ಬೈಎಟರ್ ಮೇಲೆ ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗುತ್ತದೆ. ಆದ್ದರಿಂದ ಅವರ ಟೈಂ ತಿಳಿದುಕೊಂಡು ನಾಳೆ ದಿವಸ ಇಟ್ಟುಕೊಂಡರು ಪರವಾಗಿಲ್ಲ. ಒಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕು.

ಅಧ್ಯಕ್ಷರು :— ನೋಡೋಣ. ಈಗ ಮಾನ್ಯ ಉಪಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರ ಕೊಡಿ

1999-2000ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಹಣಕಾಸಿನ ಸಚಿವರ ಉತ್ತರ.

+ಶ್ರೀ ಸಿದ್ದರಾಮಯ್ಯ (ಹಣಕಾಸಿನ ಸಚಿವರು) :— ಸನ್ಮಾನ್ಯ ಅಧ್ಯಕ್ಷರೆ, ಈ ವರ್ಷದ ಅಂದರೆ 1999-2000ನೇ ಇಸವಿಯ ಆಯವ್ಯಯದ ಮೇಲೆ ಸುಮಾರು 18 ಜನ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಇವರಲ್ಲಿ ಕೆಲವರು ಟೀಕೆಗಳನ್ನು ಮತ್ತು ಉತ್ತಮವಾದಂತಹ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಕೊನೆಯಲ್ಲಿ ಮಾತನಾಡಿದಂತಹ ಮಾನ್ಯ ವಾಟಾಳ್‌ನಾಗರಾಜ್‌ರವರು, ಮಾನ್ಯ ಅಧ್ಯಕ್ಷರಿಗೆ ಮತ್ತು ಎಲ್ಲಾ ಸದಸ್ಯರಿಗೂ ನಾವು ಮತ್ತೊಮ್ಮೆ ಸಭೆ ಸೇರುವುದಿಲ್ಲ ಎನ್ನುವ ರೀತಿಯಲ್ಲಿ ಭಾಷಣ ಮಾಡಿದ್ದಾರೆ. ಆದರೆ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ನಾವು ಇನ್ನೊಂದು ಬಾರಿ ಸಭೆ ಸೇರುತ್ತೇವೆ. ಮಾನ್ಯ ಹಿರಿಯ ಸದಸ್ಯರು ಹಾಗೂ ವಿರೋಧಪಕ್ಷದ ನಾಯಕರು ಕೂಡ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ನಾವು ಮುಖ್ಯವಾಗಿ ಪ್ರಸ್ತಾಪ ಮಾಡಿರತಕ್ಕಂಥ 1999-2000ನೇ ಇಸವಿಯ ಆಯವ್ಯಯವನ್ನು ಕೆಲವರು ಚುನಾವಣೆ ಆಯವ್ಯಯವೆಂದು ಹೇಳಿದ್ದಾರೆ. ಮತ್ತೆ ಕೆಲವರು ಸಿದ್ದರಾಮಯ್ಯನವರು ಒಂದು ರೀತಿಯಲ್ಲಿ ರಾಜಕೀಯ ಭಾಷಣ ಮಾಡಿದ್ದಾರೆಂದು ಹೇಳಿದ್ದಾರೆ. ಮತ್ತೆ ಕೆಲವರು ಕೆಲವು ಗಂಭೀರವಾದಂತಹ ವಿಚಾರಗಳನ್ನು ಕೂಡ ಪ್ರಸ್ತಾಪಿಸಿದ್ದಾರೆ. ಬಹಳ ಮುಖ್ಯವಾಗಿ ರೆವಿನ್ಯೂ ಡಿಫಿಸಿಟ್ ಬಗ್ಗೆ ಪ್ರಸ್ತಾಪಿಸಿ, ಕೆಲವು ಸದಸ್ಯರು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ, ನಮ್ಮ ಸರ್ಕಾರ

ಹೆಚ್ಚು ಸಾಲ ಮಾಡಲು ಪ್ರಾರಂಭಿಸಿ, ಸಾಲ ತೆಗೆದುಕೊಂಡು ಹೋಳಿಗೆ ತಿಂದರು ಎನ್ನುವ ರೀತಿಯಲ್ಲಿ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಶ್ರೀ ಸುರೇಶ್‌ಕುಮಾರ್‌ರವರು ಕೇಂದ್ರ ಸರ್ಕಾರದ ಬಗ್ಗೆ ಏಕೆ ಮಾತನಾಡಿದಿರಿ ಎಂದು ಕೇಳಿದ್ದಾರೆ. ಕೇಂದ್ರ ಸರ್ಕಾರದ ಬಗ್ಗೆ ಮಾತನಾಡಬಾರದೆಂದರೆ, ಅವರನ್ನು ಟೀಕೆ ಮಾಡಿದ್ದೀರಿ, ಟೀಕೆ ಮಾಡಬಾರದೆಂದು ಹೇಳಿದ್ದಾರೆ. ನಾನು ಕೇಂದ್ರ ಸರ್ಕಾರವನ್ನು ಅನಗತ್ಯವಾಗಿ ಟೀಕೆ ಮಾಡಿಲ್ಲ- ಅಥವಾ ರಾಜಕೀಯವಾಗಿ ಟೀಕೆ ಮಾಡಿಲ್ಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ, ಮತ್ತೆ ಆರ್ಥಿಕ ವಿಚಾರಗಳಿಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಮಾತ್ರ ಪ್ರಸ್ತಾಪಿಸಿದ್ದೆ. ಇದನ್ನು ಪ್ರತಿವರ್ಷವೂ ಕೂಡ ಪ್ರಸ್ತಾಪ ಮಾಡುತ್ತಿದ್ದೇವೆ. ಎಲ್ಲಾ ರಾಜ್ಯಗಳೂ ಕೂಡ ಪ್ರಸ್ತಾಪಿಸುತ್ತಿವೆ. ವಿಧಾನಸಭೆಗಳಷ್ಟೇ ಅಲ್ಲ, ನ್ಯಾಷನಲ್ ಡೆವೆಲಪ್‌ಮೆಂಟ್ ಕೌನ್ಸಿಲ್ ಬಂದಗಲೂ ಇದರ ಬಗ್ಗೆ ಮಾತನಾಡುತ್ತಿದ್ದೇವೆ. ಮುಖ್ಯಮಂತ್ರಿಗಳ ಸಭೆಯಲ್ಲೂ ಕೂಡ ಕೇಂದ್ರ ಸರ್ಕಾರದವರು ಕರೆದಾಗ, ರಾಜ್ಯಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತೇವೆ. ಏಕೆಂದರೆ ನಾವೆಲ್ಲ ಒಕ್ಕೂಟದ ವ್ಯವಸ್ಥೆಯಲ್ಲಿರುವವರು. ಕೇಂದ್ರ ಸರ್ಕಾರ ಇಡೀ ದೇಶದ ಆರ್ಥಿಕ ಪರಿಸ್ಥಿತಿ ಮತ್ತು ಅದರ ಬೆಳವಣಿಗೆ ಬಗ್ಗೆ ಸಮಗ್ರವಾಗಿ ನೋಡಬೇಕಾಗುತ್ತದೆ. ಆ ತರಹದ ಆರ್ಥಿಕ ನೀತಿಯನ್ನು ರೂಪಿಸುವುದು, ಅದಕ್ಕೆ ಬೇಕಾದ ಸಂಪನ್ಮೂಲಗಳ ವ್ಯವಸ್ಥೆಯನ್ನು ಕೂಡ ರಾಜ್ಯಗಳಿಗೆ ಒದಗಿಸುವುದು, ಈ ಬಗ್ಗೆ ಕೂಡ ಕೇಂದ್ರ ಸರ್ಕಾರದ ಜವಾಬ್ದಾರಿ ಇದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ, ಕೇಂದ್ರ ಸರ್ಕಾರಕ್ಕೆ ಸಂಪನ್ಮೂಲಗಳ ಕ್ರೋಢೀಕರಣ ಮಾಡಲಿಕ್ಕೆ ಇರುವ ಅವಕಾಶಗಳು ಹೆಚ್ಚು. ಆದರೆ, ರಾಜ್ಯ ಸರ್ಕಾರಕ್ಕೆ ಬಹಳ ಸೀಮಿತವಾದ ಅವಕಾಶಗಳಿವೆ. ಇನ್‌ಕಂ ಟ್ಯಾಕ್ಸ್ ಎಕ್ಸೈಸ್ ಡ್ಯೂಟಿಯಲ್ಲಿ ರಾಜ್ಯ ಸರ್ಕಾರಗಳಿಗೆ ಅವರ ಪಾಲನ್ನು ಪ್ರತಿವರ್ಷ ಕೂಡ ಕೊಡುತ್ತಿದ್ದಾರೆ. ಆದರಲ್ಲಿ ಅನೇಕ ವರ್ಷಗಳಿಂದ ನೀವು ನೋಡಿಕೊಂಡು ಬಂದರೆ, ಅಲ್ಲಿ ಯಾವುದೇ ರೀತಿಯ ಗಣನೀಯ ಹೆಚ್ಚಳವನ್ನು ನಾವು ನೋಡಲಿಕ್ಕೆ ಸಾಧ್ಯವಾಗುವುದಿಲ್ಲ. ಒಂದು ಮಾತನ್ನು ನಾನು ಇಲ್ಲಿ ಪ್ರಸ್ತಾಪಿಸುವುದಾದರೆ, 10ನೇ ಹಣಕಾಸು ಆಯೋಗದವರು ರಾಜ್ಯಗಳಿಗೆ ಶೇ.29ರಷ್ಟು ಸಂಪನ್ಮೂಲಗಳು ವರ್ಗಾವಣೆಯಾಗಬೇಕೆಂದು ಹೇಳಿದರು. ಇವತ್ತಿನವರೆಗೆ ಅದನ್ನು ಕೊಡುವ ಕೆಲಸವನ್ನು ಕೇಂದ್ರ ಸರ್ಕಾರವು ಮಾಡಿಲ್ಲ. ಆದರೆ, ಕೊಡಬೇಕೆಂಬ ಶಿಫಾರಸಿದ್ದರೂ, ಅದನ್ನು ನೀವು ಪ್ರತಿಸಾರಿ ಕೇಳುತ್ತಿದ್ದೇವೆ. ಕಾರಣವೇನು ಹೇಳುತ್ತಾರೆಂದರೆ, ಇನ್ನೂ ರಾಜ್ಯಾಂಗಕ್ಕೆ ತಿದ್ದುಪಡಿ ಮಾಡಿಲ್ಲ, ಆ ತಿದ್ದುಪಡಿ ಮಾಡದಿರುವುದರಿಂದ ಕೊಡುವುದಕ್ಕಾಗುವುದಕ್ಕಾಗಿಲ್ಲವೆಂದು ಹೇಳುತ್ತಾರೆ. 10ನೇ ಹಣಕಾಸು ಆಯೋಗ ಶಿಫಾರಸ್ಸು ಮಾಡಿರುವ ಪ್ರಕಾರ, ನಮಗೆ ಕೊಡಿ, ರಾಜ್ಯಾಂಗ ತಿದ್ದುಪಡಿ ಮಾಡಲು ನಿಮಗೆ ತೊಂದರೆ ಏನಿದೆ ಅಥವಾ ಪೆಂಡಿಂಗ್ ಅಮೆಂಡ್‌ಮೆಂಟ್ ಟು ದಿ ಕಾನ್‌ಸ್ಟಿಟ್ಯೂಷನ್ ಕೂಡಿ ಎಂದು ಹೇಳಿದ್ದೇವೆ. ಆದರೂ ಕೂಡ, ಇಲ್ಲಿಯವರೆಗೆ ಆ ಪ್ರಯತ್ನ ಮಾಡಿಲ್ಲ, ಈಗಾಗಲೇ 11ನೇ ಹಣಕಾಸು ಆಯೋಗ ರಚನೆಯಾಗಿದೆ. ಅವರು ಅಭಿಪ್ರಾಯಗಳನ್ನು ಕೇಳಲು ಪ್ರಾರಂಭ ಮಾಡಿದ್ದಾರೆ.

ಎಲ್ಲಾ ರಾಜ್ಯ ಸರ್ಕಾರಗಳೂ ಮೆಮೊರ್ಯಾಂಡಂ ಸಬ್‌ಮಿಟ್ ಮಾಡುತ್ತಿವೆ. ನಮಗೆ ಅದರ ಪ್ರಕಾರ ಬಂದಿದ್ದರೆ, 29 ಪರ್ಸೆಂಟ್ ಪ್ರಕಾರ ನಮ್ಮ ರಾಜ್ಯಕ್ಕೆ ಸುಮಾರು 500 ಕೋಟಿ ರೂಪಾಯಿಗಳು ಬರಬೇಕಾಗಿತ್ತು. ನಮ್ಮ ರಾಜ್ಯದಲ್ಲೇ ಅಲ್ಲ, ಇದೇ ರೀತಿಯಾಗಿ ಎಲ್ಲಾ ರಾಜ್ಯಗಳೂ ಇದರಿಂದ ವಂಚಿತವಾಗಿವೆ. ಇದನ್ನು ಕೊಡಲಿಲ್ಲವೆಂದರೆ, ಇದು ಟೀಕೆಯಾಗುವುದಿಲ್ಲ. ರಾಜ್ಯ ಸರ್ಕಾರದ ಹಣಕಾಸಿನ ಸ್ಥಿತಿ ಬಗ್ಗೆ, ಇರುವ ಸಂಪನ್ಮೂಲಗಳ ಬಗ್ಗೆ ಚರ್ಚೆ ಮಾಡುವಾಗ ಒಕ್ಕೂಟದ ವ್ಯವಸ್ಥೆಯಲ್ಲಿರುವ ನಾವು ಇದನ್ನು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಕೆಲಸವನ್ನು ಮಾಡಲೇಬೇಕು. ನಿಮಗೆ ಇನ್ನೊಂದು ಮಾತನ್ನು ನಾನು ಹೇಳಲು ಬಯಸುತ್ತೇನೆ, ದೇಶದಲ್ಲಿ ಪ್ರೊಡ್ಯೂಸ್ ಆಗುವ ಸಾಫ್ಟ್‌ವೇರ್‌ನಲ್ಲಿ ಶೇ.40ರಷ್ಟು ಕರ್ನಾಟಕ ರಾಜ್ಯದಲ್ಲೇ ಆಗುತ್ತದೆ. ಎರಡೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಸಾಫ್ಟ್‌ವೇರ್ ಬೇರೆ ದೇಶಗಳಿಗೆ ರಫ್ತಾಗುತ್ತದೆ. ಆದರೆ, ರಾಜ್ಯ ಸರ್ಕಾರಕ್ಕೇನೂ ಬರುವುದಿಲ್ಲ. ನಾವು ಅದಕ್ಕೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ, ಅದಕ್ಕೆ ಬೇಕಾದ ಪರಿಸರ ಸೃಷ್ಟಿ ಮಾಡಿ, ರಾಜ್ಯ ಸರ್ಕಾರಗಳಿಗೆ ಎಕ್ಸ್‌ಪೋರ್ಟ್ ಆಗುವುದರಲ್ಲಿ ತೆರಿಗೆಯೇನೂ ಬರುವುದಿಲ್ಲ. ಆದರೆ ಕೇಂದ್ರ ಸರ್ಕಾರಕ್ಕೆ ಫಾರಿನ್ ಎಕ್ಸ್‌ಚೇಂಜ್ ಸಿಗುತ್ತದೆ. ಅವರು ಅದರಲ್ಲಿ ನಮಗೇನೂ ಕೊಡುವುದಿಲ್ಲ. ಅದಕ್ಕೆ ನಾನು ಒತ್ತಾಯ ಮಾಡುತ್ತೇನೆ, ಸರ್ವೀಸ್ ಸೆಕ್ಟಾರ್ ಮೇಲೆ ರಾಜ್ಯ ಸರ್ಕಾರಗಳಿಗೆ ತೆರಿಗೆ ಹಾಕುವ ಅಧಿಕಾರವನ್ನು ಕೊಡಬೇಕು. ಅದನ್ನೆಲ್ಲಾ ಅವರೇ ಇಟ್ಟುಕೊಂಡು, ರಾಜ್ಯಸರ್ಕಾರಗಳಿಗೆ ಅಧಿಕಾರ ನೀಡಿದೆ, ರಾಜ್ಯಸರ್ಕಾರಗಳ ಪ್ರಯತ್ನದಿಂದಾಗುವ ರಫ್ತು, ಅದರಿಂದ ಕೇಂದ್ರಸರ್ಕಾರಕ್ಕೆ ಬರುವ ಫಾರಿನ್ ಎಕ್ಸ್‌ಚೇಂಜ್ ಇದರಿಂದ ಕೇಂದ್ರ ಸರ್ಕಾರಕ್ಕೆ ಲಾಭವಾಗುತ್ತಿದೆ. ಆದಜರೆ, ರಾಜ್ಯಗಳಿಗೇನೂ ದೊರೆಯುವುದಿಲ್ಲ. ಈ ಕಾರಣಕ್ಕೋಸ್ಕರವಾಗಿ, ರಾಜ್ಯ ಸರ್ಕಾರಗಳಿಗೆ ಸರ್ವಿಸಸ್ ಮೇಲೂ ಕೂಡ ತೆರಿಗೆ ಹಾಕುವ ಅಧಿಕಾರ ಕೊಡಬೇಕೆಂಬುದು ನಮ್ಮ ಒತ್ತಾಯ. ಈಗ ಕೇಂದ್ರ ಸರ್ಕಾರದ ಆಯ್ಕೆಯನ್ನು ತಾವು ನೋಡಿದ್ದೀರಿ. ಅದರಲ್ಲಿ ಬಹುಶ: ಶ್ರೀ ಫೋರ್ಬಡೆಯವರು ಅದನ್ನು ಒಪ್ಪಿಕೊಳ್ಳುತ್ತಾರೆ, ಅವರೇ ನಮಗೆ ಕೊಡಬೇಕಾಗುತ್ತೆಂಬುದನ್ನು ಅವರ ಭಾಷಣದಲ್ಲಿ ಹೇಳಿದ್ದಾರೆ. ಇನ್‌ಕಂಟ್ಯಾಕ್ಸ್ ಮೇಲೆ 10 ಪರ್ಸೆಂಟ್ ಸರ್‌ಚಾರ್ಜ್ ಹಾಕಿದ್ದಾರೆ. ಎಕ್ಸೈಜ್ ಡ್ಯೂಟಿ ನಮಗೆ ಪೇರಬಲ್ ಅಲ್ಲ. ಕೇಂದ್ರ ಸರ್ಕಾರದವರೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದರೆ, ಆ ನೆಪ ಉಪಯೋಗಿಸುತ್ತಾರೆ. ಸರ್‌ಚಾರ್ಜ್ ಹೆಸರು ಹೇಳಿ, ಆದರಿಂದ ಕೇಂದ್ರ ಸರ್ಕಾರಕ್ಕೆ ಬರುವ ಹಣ ಇದರಲ್ಲಿ ನಮಗೆ ಯಾವ ಪಾಲೂ ಇಲ್ಲ. ಇದರಲ್ಲಿ ನಮಗೆ ಪಾಲು ಕೊಡಬೇಕೆಂದು ಕೇಳಿದರೆ, ಇಲ್ಲ ನೀವು ಕೇಳುವ ಹಾಗಿಲ್ಲ, ಅದನ್ನು ಬೇರೆ ರೀತಿಯಲ್ಲಿ ಬೇರೆ ರಾಜ್ಯಗಳಿಗೆ ಉಪಯೋಗಿಸುತ್ತಾರೆ, ಎಂದು ಹೇಳುತ್ತಾರೆ. ಕೇಳುವ ಹಾಗಿಲ್ಲವೆಂದರೆ ಹೇಗೆ? ರಾಜ್ಯ ಸರ್ಕಾರಗಳು ಕೂಡ ತಮ್ಮ ಪಾಲುಗಾರಿಕೆಯನ್ನು ಪಡೆದುಕೊಳ್ಳುವುದಕ್ಕೆ ಅರ್ಹತೆ ಇದೆ ಎಂದು ನಾವು ಡೈರೆಕ್ಟಾಗಿ ಹೇಳಬೇಕಾಗುತ್ತದೆ. ಅದಕ್ಕೂ ಕೂಡ ಕೊಡಬೇಕೆಂದು ನಾವು ಕೇಳುವುದು. ಇದನ್ನು ಟೀಕೆ ಮಾಡಿದಂತೆ ಆಯಿತೇ? ನಾವು ಪ್ರತಿ ಬಾರಿಯೂ